The Academic
International Journal of Multidisciplinary Research
An Online Peer Reviewed / Refereed Journal
Volume 4 | Special Issue 3 | April 2026
ISSN: 2583-973X (Online)
Website: www.theacademic.in

# ಭೂ-ರಾಜಕೀಯ ಸಂಘರ್ಷಗಳ ನಡುವೆ ಭಾರತದ ಸ್ಥಿತಿ

ಡಾ. ಸಿ. ಬಿ. ನಂದನ

ಸಹ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಶ್ರೀ. ಸಿದ್ದೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತರ ಅಧ್ಯಯನ ಕೇಂದ್ರ ನರಗುಂದ cbnandana69@gmail.com

**DOI : https://doi.org/10.5281/zenodo.20100020**

**ARTICLE DETAILS**

**Research Paper**

**Accepted:** 04-04-2026

**Published:** 25-04-2026

**ABSTRACT**

ಈ ಭೂ-ರಾಜಕೀಯ ಸಂಘರ್ಷನವು ಭೌಗೋಳಿಕ ಪ್ರದೇಶದ ವಿವಾದಗಳು, ಪ್ರಾಕೃತಿಕ ಸಂಪನ್ಮೂಲಗಳ ಮೇಲಿನ ಸ್ಪರ್ಧೆ, ಪ್ರಾದೇಶಿಕ ಗಡಿ ವಿವಾದಗಳು, ಹವಮಾನ ಬದಲಾವಣೆ ಮತ್ತು ಪರಿಸರ ಅಪಾಯಗಳು, ಮಿಲಿಟರಿ ಮತ್ತು ಸುರಕ್ಷಿತಾ ಬೀತಿಗಳು, ಆರ್ಥಿಕ ಪ್ರಭಾವ ಮತ್ತು ವ್ಯಾಪಾರ ನಿಬಂಧಗಳು, ರಾಜಕೀಯ ಸಿದ್ಧಾಂತಗಳ ವ್ಯತ್ಯಾಸ, ಆರ್ಥಿಕ ಹಿತಾಸಕ್ತಿಗಳು, ರಾಷ್ಟ್ರೀಯತೆಯ ಭಾವನೆ, ಧಾರ್ಮಿಕ ಮತ್ತು ಸಂಸ್ಕೃತಿಕ ಭಿನ್ನತೆ, ಮತ್ತು ಐತಿಹಾಸಿಕ ವೈಶ್ಯಮ್ಯಗಳು, ಹೀಗೆ ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಇನ್ನೂ ಹಲವಾರು ವಿಷಯಗಳು ಒಳಗೊಂಡಿರುತವೆ. ಈ ಎಲ್ಲಾ ವಿಷಯಗಳನ್ನು ಗಮನಿಸಿದಾಗ ವಿಶ್ವದ ಅನೇಕ ರಾಷ್ಟ್ರಗಳು ಅದರಲ್ಲಿ ಭಾರತವು ಸೇರಿದಂತೆ ಈ ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿರುತ್ತವೆ. ಅದೇ ರೀತಿಯಾಗಿ ಇರಾನಿನ ಪರಮಾಣು ಶಸ್ತ್ರಾಸ್ತ್ರ, ನೆಲೆಗಳು ಕ್ಷಿಪಣಿ ಉಡಾವಣಾ ವ್ಯವಸ್ಥೆಗಳು, ವಾಯುರಕ್ಷಣಾ ಪಡೆಗಳು, ರೆವಲೂಷನರಿ ಗಾರ್ಡ್ಸ್ ಕಚೇರಿಗಳು, ಗುರಿಯಾಗಿಟ್ಟುಕೊಂಡು, ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನಿನ ಮೇಲೆ ಭಯಾನಕರ ಯುದ್ಧ ಮಾಡಲು ಪ್ರಾರಂಭಿಸಿದೆ. ಈ ಭಯಾನಕರ ಯುದ್ಧದಿಂದ ವಿಶ್ವದ ಅನೇಕ ರಾಷ್ಟ್ರಗಳಿಗೆ ನೈಸರ್ಗಿಕ ಸಂಪನ್ಮೂಲಗಳ ಕೊರತೆಯಿಂದ ಆರ್ಥಿಕ ಸ್ಥಿತಿಯು ಚಿಂತ ಜನಕವಾಗಿದೆ. ಪ್ರಸ್ತುತ ಭಾರತದಲ್ಲಿ ಆರ್ಥಿಕ ಸಮಸ್ಯೆಗಳು ಕುರಿತು

ತಜ್ಞರ ಅಂದಾಜಿನ ಪ್ರಕಾರ ಯುದ್ಧ ಹೀಗೆ ಮುಂದುವರಿದರೆ, ದೇಶದ ಆರ್ಥಿಕತೆಯ ಮೇಲೆ ಬಹುದೊಡ್ಡ ಪರಿಣಾಮಗಳು ಉಂಟಾಗಲಿದೆ. ಮತ್ತು ಎದುರಿಸಬೇಕಾಗುತ್ತದೆ. ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಭಾರತವು ತನ್ನ ಕಾರ್ಯತಂತ್ರದ ತೈಲ ಸಂಗ್ರಹಣಾ ಸೌಲಭ್ಯಗಳನ್ನು ಘರಿಷ್ಠ ಮಟ್ಟದಲ್ಲಿ ತುಂಬಿಟ್ಟುಕೊಳ್ಳುವುದು, ಹಾಗೂ ಬಹು-ಜೋಡಣೆ ತಂತ್ರವನ್ನು ಅನುಸರಿಸುವುದು ಇರಾನ್ ಮತ್ತು ಗಲ್ಫ್ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಸಿ, ತನ್ನ ಆರ್ಥಿಕ ಹಿತಾಸಕ್ತಿಗಳನ್ನು ಮಾಡಿಕೊಳ್ಳುವುದು ಮತ್ತು ರಕ್ಷಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಹೇಳಬಹುದು.

## ೨. ಪ್ರಸ್ತಾವನೆ

ಇಂದಿನ ಜಗತ್ತು ಹಲವಾರು ಸ್ವಾತಂತ್ರ್ಯ ಸಾರ್ವಭೌಮ ರಾಷ್ಟ್ರಗಳಿಂದ ಕೂಡಿದೆ. ಈ ರಾಷ್ಟ್ರಗಳು ತಮ್ಮದೇ ಆದ ಒಂದು ಸ್ವಂತ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತವೆ. ಇಂದಿನ ವೈಜ್ಞಾನಿಕ ಅಣು ಯುಗದಲ್ಲಿ ಹಾಗೂ ವಿವಿಧ ರಾಷ್ಟ್ರಗಳನ್ನು ವರ್ಗೀಕರಿಸಲಾಗಿದೆ. ಅವುಗಳೆಂದರೆ, ಅಭಿವೃದ್ಧಿ ಹೊಂದಿದ ರಾಷ್ಟ್ರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ ಮತ್ತು ಹಿಂದುಳಿದ ರಾಷ್ಟ್ರಗಳು ಎಂದು ಮೂರ ರೀತಿಯಿಂದ ಕಾಣುತ್ತೇವೆ. ಪ್ರಸ್ತುತದಲ್ಲಿ ಭಾರತವು ಅಭಿವೃದ್ಧಿ ಹೊಂದುತ್ತಿರುವ ದೇಶವೆಂದು ಪರಿಗಣಿಸಲ್ಪಟ್ಟಿದೆ. ಮತ್ತು ಅನಬಿರುದ್ಧಿ ಹೊಂದಿದ ದೇಶಗಳು ತೃತೀಯರಂಗದ ದೇಶಗಳೆಂದು ಕರೆಯುವುದು ಸರ್ವಸಾಮಾನ್ಯವಾಗಿದೆ. ಸಾರ್ವಭೌಮ ರಾಷ್ಟ್ರಗಳು ರಾಜಕೀಯ ಅಸ್ತ್ರವಾದ ಮಿಲಿಟರಿಯಾ ಮೂಲಕ ಆಕ್ರಮಿಸಿಕೊಳ್ಳುವುದು ಬಹಳ ಹಳೆಯ ಪದ್ಧತಿಯಾಗಿದ್ದು ಇಂತಹ ಪದ್ಧತಿಯ ಮೂಲಕವೇ ಬ್ರಿಟಿಷರು ಭಾರತವನ್ನೊಳಗೊಂಡು ಇಡೀ ವಿಶ್ವವನ್ನೇ ಸುಮಾರು ೨೦೦ ವರ್ಷಗಳಿಗಿಂತಲೂ ಹೆಚ್ಚು ಕಾಲ ವಸಾಹತುಶಾಹಿಗಳನ್ನಾಗಿ ಮಾಡಿಕೊಂಡು ಆರ್ಥಿಕ ಅಸ್ತ್ರದ ಮೂಲಕ ಆಳುವ ಒಂದು ರಾಜಕೀಯ ತಂತ್ರಗಾರಿಕೆಯಿಂದ ಆಡಳಿತ ಮಾಡಿದರು. ವಿಶ್ವವೋ ಎರಡು ಮಹಾನ ಜಾಗತೀಕರಣ ಯುದ್ಧಗಳನ್ನು ಕಾಣುತ್ತೇವೆ. ಅದರಲ್ಲಿ ೧೯೩೯ ರಿಂದ ೧೯೪೫ ವರೆಗೆ ಎರಡನೆ ಮಹಾಯುದ್ಧ ನಡೆಯಿತು ಈ ಯುದ್ಧದ ಪರಿಣಾಮದಿಂದಾಗಿ ಯುರೋಪ ದೇಶಗಳು ಆರ್ಥಿಕ ದಿವಾಳಿ ಆಗಿ ಆರ್ಥಿಕ ಮುಗ್ಗಟ್ಟಿನಿಂದ ಹೊರಬರಲು, ಎಷ್ಟೋ ರವರ್ಷಗಳು ಬೇಕಾಯಿತು. ಆದರೆ ಮತ್ತೆ ಆ ಪರಿಸ್ಥಿತಿ ಮರುಕಳಿಸುತ್ತದೆ ಎಂಬ ಇಂದಿನ ಪರಿಸ್ಥಿತಿ ದಿನದಿಂದ ದಿನಕ್ಕೆ ಮೂರನೇ ಮಹಾಯುದ್ಧದ ಭಯದ ಭೀತಿ ವಾತಾವರಣ ನಿರ್ಮಾಣವಾಗುವಂತೆ ಕಾಣುತ್ತದೆ. ಯಾಕಂದರೆ ಅಮೆರಿಕ ಇಸ್ರೇಲ್ ಎರಡು ರಾಷ್ಟ್ರಗಳು ಸೇರಿ ಇರಾನ್ ದೇಶದ ಮೇಲೆ ಹಠತ್ತಾಗಿ ದಾಳಿ ಮಾಡಿತು ಇದರಿಂದಾಗಿ ವಿಶ್ವದ ಬಹುತೇಕ

ರಾಷ್ಟ್ರಗಳು ಈ ಮೂರು ದೇಶಗಳ ಯುದ್ದವನ್ನು ಅವಲೋಕಿಸಿದಾಗ ಯಾವುದೇ ರಾಷ್ಟ್ರವು ನೀತಿ ನಿಯಮ ಮತ್ತು ನೈತಿಕತೆಯಿಂದ ವರ್ತನೆಯು ಬಹಳ ಮಹತ್ವದ್ದಾಗಿರುತ್ತದೆ. ಆದರೆ ಅಮೇರಿಕಾ ಮತ್ತು ಇಸ್ರೇಲ್ ಈ ಎರಡು ದೇಶಗಳು ಯುದ್ದದ ಮಾತುಕತೆ ಆಗದೆ ಇರಾನಿನ ಶಾಲಾ ಮಕ್ಕಳ ಮೇಲೆ ದಾಳಿ ಮಾಡಿ ಹತ್ಯೆ ಮಾಡಿರುವುದು ಈ ಘಟನೆಯನ್ನು ಬಹುತೇಕ ರಾಷ್ಟ್ರಗಳು ಖಂಡಿಸಿರುತ್ತವೆ. ಅಷ್ಟೇಅಲ್ಲ ಅಂತರಾಷ್ಟ್ರೀಯ ಕಾನೂನುಗಳನ್ನು ಮತ್ತು ವಿಶ್ವಸಂಸ್ಥೆಯ ಗುರಿಯನ್ನು ಧಿಕ್ಕರಿಸಿ ಇಡೀ ವಿಶ್ವಕ್ಕೆ ಅಶಾಂತಿಯನ್ನು ಉಂಟುಮಾಡುವ ನಿಟ್ಟಿನಲ್ಲಿ ಈ ಕದನಗಳು ನಡೆದಿವೆ ಎಂದು ಹೇಳಬಹುದು.

**೩. ಅಧ್ಯಯನದ ಮಹತ್ವ**

ಜಾಗತೀಕರಣ ವಿದ್ಯಮಾನಗಳಲ್ಲಿ ಹಲವಾರು ಬದಲಾವಣೆಗಳನ್ನು ಕಾಣುತ್ತೇವೆ. ಅಂದರೆ ಬದಲಾವಣೆಯು ಜಗದ ನಿಯಮ ಇವತ್ತಿನ ಬದಲಾವಣೆಯನ್ನು ಕಂಡುಕೊಂಡಾಗ, ತಂತ್ರಜ್ಞಾನದ, ಕೃತಕ ಬುದ್ದಿಮತ್ತೆ ಮತ್ತು ಹೊಸ ಹೊಸ ಆವಿಷ್ಕಾರಗಳು ಆದಂತೆಲ್ಲ ಮಾನವನ ಅಭಿವೃದ್ದಿಗೆ, ಪೂರಕ ಮತ್ತು ಮಾರಕ ಅಂಶಗಳು ಒಳಗೊಂಡಿರುತ್ತವೆ. ಅವುಗಳಲ್ಲಿ ಮಾನವನು ತನ್ನ ಅಭಿವೃದ್ದಿಗಾಗಿ ನೆರೆ ಹೊರೆ ರಾಷ್ಟ್ರಗಳ ಸಂಬಂಧವನ್ನು ಹಾಗೂ ತನ್ನ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲು ರಾಜಕೀಯ ಮತ್ತು ಮಿಲಿಟರಿ ಶಕ್ತಿಯ ತಂತ್ರಗಾರಿಕೆಯನ್ನು ಬಳಸಿಕೊಂಡು ಆರ್ಥಿಕವಾಗಿ ಪ್ರಬಲವಾಗಲು ಸದಾ ಹೋರಾಟದಲ್ಲಿ ತೊಡಗಿರುತ್ತವೆ. ಅದರಲ್ಲಿ ಭೂ ರಾಜಕಾರಣ ಕುರಿತು ವಿಲಿಯಮ್ ಹೆಸ್ಸರ್ ರಅವರು ಹೇಳುವಂತೆ ವಾತಾವರಣ ಹಾಗೂ ರಾಜಕಾರಣದ ನಡುವೆ ಇರುವ ಸಂಬಂಧವನ್ನು ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಮತ್ತು ಭೂ ರಾಜಕೀಯ ಶಾಸ್ತ್ರವು ಭೌಗೋಳಿಕ ಮತ್ತು ರಾಜಕಾರಣದ ಮಧ್ಯದ ಸಂಬಂಧದ ಶಾಸ್ತ್ರವಾಗಿದ್ದು, ಭೌಗೋಳಿಕ ಅಂಶವು ರಾಜಕೀಯ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುತ್ತವೆ ಎಂಬುವುದರ ಬಗ್ಗೆ ವಿಶ್ಲೇಷಣಾತ್ಮಕ ಮಹತ್ವದ ಅಧ್ಯಯನದ ವಿವರಣೆಯನ್ನು ನೀಡುತ್ತದೆ. ಇಂಥ ವಿವರಣೆಗಳನ್ನು ಒಂದು ದೇಶದ ಭೌಗೋಳಿಕ ನೆಲೆಯ ಪರಿಸ್ಥಿತಿ ಹಾಗೂ ಅದರ ಸ್ವರೂಪಗಳ ಕುರಿತು ಅಧ್ಯಯನಗಳು ಹಾಗೂ ವಿವರಣಾತ್ಮಕ ಚಿಂತನೆಗಳ ಬಗ್ಗೆ ರಾಜಕೀಯ ಮುಖಂಡರಿಗೆ ಅರಿವು ಮತ್ತು ಮನವರಿಕೆ ಮಾಡಿಕೊಡುವುದು ಈ ಮಹತ್ವದ ಅಧ್ಯಯನವಾಗಿದೆ.

ಭೂ-ರಾಜಕೀಯ ಸಂಘರ್ಷ (Geo-political Conflict) ಎಂದರೆ ಭೌಗೋಳಿಕ ಸ್ಥಾನ, ಪ್ರಾಕೃತಿಕ ಸಂಪನ್ಮೂಲಗಳು (ತೈಲ, ಅನಿಲ, ನೀರು) ಅಥವಾ ಆಯಕಟ್ಟಿನ ಪ್ರದೇಶಗಳ ಮೇಲಿನ ನಿಯಂತ್ರಣಕ್ಕಾಗಿ ರಾಷ್ಟ್ರಗಳ ನಡುವೆ ನಡೆಯುವ ಪೈಪೋಟಿ ಅಥವಾ ಸಂಘರ್ಷವಾಗಿದೆ. ಮತ್ತು ಇದು ಯುದ್ದ, ದಿಗ್ಬಂಧನ, ವ್ಯಾಪಾರ ನರ್ಬಂಧನೆಗಳು ಮತ್ತು ರಾಜಕೀಯ ಧ್ರುವೀಕರಣದ ರೂಪದಲ್ಲಿ ವ್ಯಕ್ತವಾಗುತ್ತದೆ. ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಬರುವ ಭೂ ರಾಜಕೀಯವೆಂದರೆ, ಭೌಗೋಳಿಕ ಪರಿಸ್ಥಿತಿಯು

ರಾಷ್ಟ್ರದ ರಾಜಕೀಯ ಹಾಗೂ ಅಂತರಾಷ್ಟ್ರೀಯ ರಾಜಕಾರಣದ ಮೇಲೆ ಪರಿಣಾಮ ಬೀರುತ್ತದೆ. ರಾಜಕೀಯ ಗುರಿ ಸಾಧನೆಗೆ ಭೌಗೋಳಿಕ ಅಂಶವನ್ನು ಉಪಯೋಗಿಸುವ ಶಾಸ್ತ್ರವೇ ಭೂ ರಾಜಕಾರಣವಾಗಿದೆ ಎಂದು ಹೇಳಲಾಗಿದೆ. ಭೂ ರಾಜಕೀಯ ಸಂಘರ್ಷ ಎಂದರೆ ಪ್ರಾಕೃತಿಕ ಸಂಪನ್ಮೂಲಗಳು ಅವುಗಳ ಪ್ರಮುಖ ಆಯಕಟ್ಟಿನ ಪ್ರದೇಶಗಳು ಜಾಗತೀಕರಣ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಸದಾ ಪ್ರಯತ್ನದಲ್ಲಿ ತೊಡಗುತ್ತದೆ. ಇಂತಹ ಪ್ರಯತ್ನದಲ್ಲಿ ತೊಡಗುತ್ತಿರುವ ಪ್ರಭಾವ ರಾಷ್ಟ್ರಗಳು ಹಿತಾಸಕ್ತಿಯನ್ನು ನಿಯಂತ್ರಿಸಲು ಅನೇಕ ರಾಷ್ಟ್ರಗಳ ನಡುವೆ ಉಂಟಾಗುವ ವಿವಾದ ಅಥವಾ ಸಂಘರ್ಷ ಭೌಗೋಳಿಕ ಮತ್ತು ರಾಜಕೀಯ ಅಧಿಕಾರಗಳ ನಡುವೆ ಉದ್ಭವಿಸುವ ಸಂಘರ್ಷ ಅಥವಾ ವಿವಾದ ಕದನ ಎಂದು ಹೇಳಬಹುದು. ಭೂ-ರಾಜಕಾರಣ ಸಂಘರ್ಷನವು ಪ್ರಬಲ ರಾಜಕೀಯ ಅಧಿಕಾರದ ಮತ್ತು ಮಿಲಟರಿ ಶಕ್ತಿಯಿಂದ ಪ್ರದೇಶವನ್ನು ನಿಯಂತ್ರಣ ಮತ್ತು ರಾಷ್ಟ್ರಗಳ ನಡುವಿನ ಹಿತಾಸಕ್ತಿಗಳಿಗಾಗಿ ಹೋರಾಟವನ್ನು ಪ್ರತಿನಿಧಿಸುವುದೇ ಭೂ-ರಾಜಕೀಯ ಸಂಘರ್ಷವೆಂದು ಹೇಳಬಹುದಾಗಿದೆ.

## ೪. ಭೂ-ರಾಜಕೀಯ ಐತಿಹಾಸಿಕ ಬೆಳವಣಿಗೆ

ಭೂ-ರಾಜಕಾರಣದ ಪ್ರಾರಂಭವು ಇಮ್ಯಾನ್ಯುಯಲ್ ಕ್ಯಾಂಟ (೧೭೨೪-೧೮೦೪) ನಿಂದ ಬೆಳವಣಿಗೆ ಪ್ರಾರಂಭವಾಯಿತೆಂದು ಹೇಳುತ್ತಾರೆ. ಫೆಡ್ರಿಕ್ ರಾಝುಲ್ (೧೮೪೪-೧೯೦೪) ಮತ್ತು ರುಡಾಲ್ಫ ಜೆತಿನ್ (೧೮೬೪-೧೯೨೨) ಇವರು ಈ ಶಾಸ್ತ್ರವನ್ನು ಬೆಳೆಸಿದರು. ಬ್ರಿಟನ್ನ ಸರ್ ಹಾಲರ್ಡ್ ಮ್ಯಾಕೆಂಡರ್ (೧೮೬೯-೧೯೪೨) ರ್ಮನಿಯ ಕರ್ಲ ಹಾಶೋಫರ (೧೮೬೯-೧೯೪೬) ಅಮೇರಿಕೆಯ ಕ್ಯಾಪ್ಟನ್ ಎ.ಟಿ. ಮಹಾನ್, ನಿಕೋಲಸ್ ಸ್ಪ್ಯಾಯಕಮನ್, ಸ್ಪ್ಯಾರ್-ಪಿ. ಗರ್ಡ್ನ್ ಈಸ್ಟ, ಚರ್ಲ್ಸ್ ಕುಝುವ, ಆಲ್ಬ್ರ್ಟ ರೋಜ ಮುಂತಾದವರು ಈ ಶಾಸ್ತ್ರಕ್ಕೆ ವ್ಯವಸ್ಥಿತ ರೂಪವನ್ನು ಕೊಟ್ಟರು. ಇವರೆಲ್ಲ ಬೆಳೆಸಿದ ಭೂ-ರಾಜಕೀಯ ಶಾಸ್ತ್ರದ. ವಿವರಣೆಯನ್ನು ಈ ರೀತಿಯಾಗಿ ಕೊಡಬಹುದು. ಆಫ್ರೊ-ಯುರೇಶಿಯಾ ಖಂಡದ ಮಧ್ಯದಲ್ಲಿಯ ವೋಲ್ಗಾ ನದಿ, ರ್ಕಟಿಕ್ ಸಾಗರ, ಯಾಂಗ ನದಿ, ಹಿಮಾಲಯ ರ್ವತಗಳಿಂದ ಸುತ್ತುವರೆಯಲ್ಪಟ್ಟ ಭಾಗವನ್ನು ಸರ್ ಮ್ಯಾಕೆಂಡರರು "ಮಧ್ಯಭಾಗ" ಇಲ್ಲವೆ "ಹೃದಯಸ್ಥ ಪ್ರದೇಶ" ಅಂದರೆ (Heat land) ಎಂದು ಕರೆಯುತ್ತಾರೆ. ಸೈನಿಕ ದೃಷ್ಟಿಯಿಂದ ಇದು ಅತ್ಯಂತ ಭದ್ರವಾದ ಪ್ರದೇಶ, ಇದರ ಭದ್ರತೆಯ ಕಾರಣ ಇದರ ಭೌಗೋಲಿಕ (Location) ದಲ್ಲಿಯೇ ಇದೆ. ನಗರ ರಾಜ್ಯಗಳ ಸಮುದ್ರ ಮರ್ಗದ ಆಕ್ರಮಣಗಳಿಂದ ಇದು ಸುರಕ್ಷಿತವಾಗಿರುತ್ತದೆ. ಸುರಕ್ಷಿತವಾದ ಭೂ ಶಕ್ತಿಯು (Land power) ಸಾಗರಶಕ್ತಿಗಿಂತ (Sea-power) ಹೆಚ್ಚು ಬಲಿಷ್ಠವಾಗಿರುತ್ತದೆ. ಆದ್ದರಿಂದ, ಬಲಿಷ್ಠವಾದ ಈ “ಹೃದಯಸ್ಥ ಪ್ರದೇಶ” ವು (Heart land) ಜಗತ್ತಿನ ಇತರ ಭಾಗಗಳನ್ನು ತನ್ನ ವಶದಲ್ಲಿ ತೆಗೆದುಕೊಳ್ಳಲು ಶಕ್ತವಾಗಿರುತ್ತದೆ “ಪರ್ವ ಯುರೋಪವನ್ನು ಆಳುವವನು ಹೃದಯಸ್ಥ ಪ್ರದೇಶವನ್ನು ಆಳುವವನು” ಆಫ್ರೊ-ಯುರೇಶಿಯಾ ಖಂಡವನ್ನು ಆಳುತ್ತಾನೆ. “ಆಫ್ರೊ-

ಯುರೇಶಿಯಾ ಖಂಡವನ್ನು ಆಳುವವನು ಜಗತ್ತನ್ನೇ ಆಳುತ್ತಾನೆ" ಎಂದು ಮ್ಯಾಕೆಂಡರರು ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಹಾಗೂ ಈ ವಿಷಯ ಕುರಿತು ಹೆಚ್ಚಿನ ಮಹತ್ವವನ್ನು ೯ನೇ ಶತಮಾನದ ಅಂತ್ಯದ ವೇಳೆಗೆ ಯುರೋಪಿಯನ್ ವಸಾಹತುಶಾಹಿ ಶಕ್ತಿಯ ಪ್ರಯತ್ನಗಳಿಂದ ಭೂ-ರಾಜಕೀಯ ಎಂಬ ನರ್ದಿಷ್ಟವಾಗಿ ವಿಷಯವು ಹೊರಹೊಮ್ಮಿತು.

## ೫. ಭಾರತವು ಜಾಗತೀಕ ಮಟ್ಟದಲ್ಲಿ ಐತಿಹಾಸಿಕ ಸ್ಥಾನಮಾನ

ಭಾರತ ೧೯೪೫ ರ ಜೂನ್ ೨೬ರಂದು ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ವಿಶ್ವಸಂಸ್ಥೆಯು ಪ್ರಣಾಳಿಕೆಯನ್ನು ಅಂಗೀಕರಿಸಿದ ವಿಶ್ವ ಸಂಸ್ಥೆಯ ೫೧ ಸಂಸ್ಥಾಪಕ ಸದಸ್ಯ ರಾಷ್ಟ್ರಗಳಲ್ಲಿ ಭಾರತವು ಒಂದಾಗಿರುತ್ತದೆ ಅಂತರಾಷ್ಟ್ರೀಯ ಸಂಬಂಧಗಳಲ್ಲಿ ವಿಶ್ವಸಂಸ್ಥೆಯ ಪ್ರಣಾಳಿಕೆಯ ಉದ್ದೇಶಗಳು ತತ್ವಗಳು ಮತ್ತು ನಿಬಂಧನೆಗಳಿಗೆ ಯಾವಾಗಲೂ ಭಾರತವು ಬದ್ಧವಾಗಿರುತ್ತದೆ. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡಿಕೊಂಡು ಬರಲು ತನ್ನ ಸಾರ್ವಭೌಮತ್ವದ ಆಧಾರದ ಮೇಲೆ ರಾಷ್ಟ್ರ ರಾಷ್ಟ್ರಗಳ ನಡುವೆ ಮೈತ್ರಿಯುತ ಸಂಬಂಧಗಳ ಸಹಕಾರ ಉತ್ತೇಜಿಸುವ ಸಲುವಾಗಿ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಭಾರತವು ಅಂತರಾಷ್ಟ್ರೀಯ ಸಂಬಂಧಗಳ ಮಹತ್ವವನ್ನು ನಿರ್ಧರಿಸುತ್ತದೆ. ೧೯೫೩ ರಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಪ್ರಥಮ ಮಹಿಳೆ ಅಧ್ಯಕ್ಷರಾಗಿ ಆಯ್ಕೆಯಾದರೂ ಮತ್ತು ೫ ದ್ವಿವಾರ್ಷಿಕ ಅವಧಿಯೊಳಗೆ ಭಾರತ ಭದ್ರತಾ ಸಮಿತಿಯಲ್ಲಿ ತಾತ್ಕಾಲಿಕ ಸದಸ್ಯತ್ವವನ್ನು ಹೊಂದಿತ್ತು ಅಲ್ಲದೆ ೮ ಸಲ ಆಯ್ಕೆಗೊಂಡಿತ್ತು ೧೯೪೭ರಿಂದ ಮಾನವ ಹಕ್ಕುಗಳ ಆಯೋಗ ಸ್ಥಾಪಿಸಲ್ಪಟ್ಟಾಗಿನಿಂದಲೂ ಭಾರತವು ಆಯೋಗದ ಸದಸ್ಯ ರಾಷ್ಟ್ರವಾಗಿದೆ ಮತ್ತು ೧೯೮೨ ರಲ್ಲಿ ಡಾ. ನಾಗೇಂದ್ರ ಸಿಂಗ್ ಅಂತರಾಷ್ಟ್ರೀಯ ನ್ಯಾಯಾಲಯದಲ್ಲೂ ಭಾರತದ ಪ್ರತಿನಿಧಿಯಾಗಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು ಅದೇ ರೀತಿಯಾಗಿ ೧೯೭೮ರ ಜಿನೀವದಲ್ಲಿ ನಿಶಸ್ತ್ರೀಕರಣದ ಸಮಿತಿಯ ಸಮ್ಮೇಳನದಲ್ಲಿ ಭಾರತ ಭಾಗವಹಿಸಿದ್ದು ಮುಂದೆ ೧೯೭೯ ರಲ್ಲಿ ಭಾರತ ನಿಶಸ್ತ್ರೀಕರಣ ಸಮಿತಿಗೆ ಚುನಾಯಿತಗೊಂಡಿತು ಎಂದು ಹೇಳಲಾಗಿದೆ. ಈ ರೀತಿ ಮೇಲಿನ ಎಲ್ಲಾ ಐತಿಹಾಸಿಕ ಸಂಗತಿಗಳನ್ನು ನೋಡಿದಾಗ ಭಾರತವು ವಿಶ್ವಕ್ಕೆ ಮಾದರಿಯಾಗುವಂತೆ ಪ್ರತಿಷ್ಠೆಗೆ ಹೆಸರುವಾಸಿಯಾಗಿರುತ್ತದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಭಾರತವು ತನ್ನ ಸ್ಥಾನಮಾನವನ್ನು ಅವಲೋಕನ ಮಾಡಿದಾಗ ಆರ್ಥಿಕ ವಾಣಿಜ್ಯ ಉದ್ಯಮಗಳಲ್ಲಿ ಹಾಗೂ ಜನರ ಸ್ಥಿತಿಗತಿಗಳನ್ನು ಕಂಡುಕೊಂಡಾಗ ಆರ್ಥಿಕವಾಗಿ ಸಫಲವಾಗಿದೆ ಎಂದು ಹೇಳಬಹುದಾಗಿದೆ. ಯಾಕೆಂದರೆ ವಿಶ್ವದ ಕೆಲವು ಪ್ರಮುಖ ರಾಷ್ಟ್ರಗಳಾದ ಅಮೇರಿಕಾ ಇಸ್ರೇಲ್ ಮತ್ತು ಇರಾನ್ ಈ ಮೂರು ಯುದ್ಧಗಳಿಂದಾಗಿ ಇಡೀ ವಿಶ್ವಕ್ಕೆ ಆರ್ಥಿಕವಾಗಿ ಪೆಟ್ಟು ಬಿದ್ದಿದೆ ಎಂದು ಹೇಳಬಹುದು. ಭೌಗೋಳಿಕ ರಾಜಕೀಯ ಸಂಘರ್ಷ ಉದ್ವಿಗ್ನತೆಗಳು ಆರ್ಥಿಕ ಮುನ್ನೋಟಕ್ಕೆ ಪ್ರತಿಕೂಲ

ಅಪಾಯಗಳನ್ನುಂಟುಮಾಡುತ್ತವೆ. ವಿಶೇಷವಾಗಿ ಮಧ್ಯಪ್ರಾಚ್ಯ ಪಶ್ಚಿಮ ಏಷ್ಯಾ ಮತ್ತು ಯುರೋಪ್ನಲ್ಲಿನ ದೀರ್ಘಕಾಲದ ಸಂಘರ್ಷಗಳಿಂದ ಉದ್ವಿಗ್ನತೆಗಳು, ಆಮದು ವೆಚ್ಚಗಳನ್ನು ಹೆಚ್ಚಿಸುವ, ಪೂರೈಕೆ ಸರಪಳಿಗಳನ್ನು ಅಡ್ಡಿಪಡಿಸುವ ಮತ್ತು ಷೇರು ಮಾರುಕಟ್ಟೆಯ ಏರಿಳಿತಗಳನ್ನು ಉಂಟುಮಾಡುವ ಮೂಲಕ ಜಾಗತಿಕ ಆರ್ಥಿಕತೆಗೆ ಪೆಟ್ಟು ಬಿದ್ದಿದೆ. ಇದರಿಂದಾಗಿ ಭಾರತ ಆರ್ಥಿಕತೆಯನ್ನು ಎದರಿಸುವಲ್ಲಿ ದೊಡ್ಡ ಸವಾಲಾಗಿದೆ.

## ೬. ಭಾರತದ ಆರ್ಥಿಕತೆ ಮತ್ತು ಪ್ರಸ್ತುತತೆ

ಇರಾನಿನ ಪರಮಾಣು ಶಸ್ತ್ರಾಸ್ತ್ರ ನೆಲೆಗಳು ಕ್ಷಿಪಣಿ ಉಡಾವಣಾ ವ್ಯವಸ್ಥೆಗಳು, ವಾಯುರಕ್ಷಣಾ ಪಡೆಗಳು, ರೆವಲೂಷನರಿ ಗಾರ್ಡ್ಸ್ ಕಚೇರಿಗಳು, ಮತ್ತು ಖಮೇನಿಯವರನ್ನ ಮತ್ತು ಅವರ ನಿವಾಸವನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ಫೆಬ್ರುವರಿ ೨೮ ೨೦೨೬ ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನಿನ ಮೇಲೆ ಭೀಕರ ಧಾಳಿಯನ್ನು ಮಾಡಿತು. ಮೀನಾಬ ಬಳಿಯ ಬಾಲಕೀಯರ ಶಾಲೆಯ ಮೇಲೆ ನಡೆಸಿದ ದಾಳಿಯಲ್ಲಿ ಸುಮಾರು ೮೫ ವಿದ್ಯಾರ್ಥಿಗಳು ಅಂದರೆ ೭ ರಿಂದ ೧೨ ವರ್ಷದ ಒಳಗಿನ ಮಕ್ಕಳ ಮರಣ ಹೋಮ, ಹಾಗೂ ಇರಾನಿನ ಸರ್ವೋಚ್ಚ ನಾಯಕ ಆಯಾತುಲ್ಲಾ ಅಲ್ಲಿ ಖಮೇನಿ ಸೇರಿದಂತೆ, ಅಲ್ಲಿಯ ಪ್ರಮುಖ ಅಧಿಕಾರಿಗಳನ್ನು, ಮತ್ತು ಸರಕಾರಿ ನೆಲೆಗಳನ್ನು ಧ್ವಂಸಗೊಳಿಸಿ, ಕನಿಷ್ಠ ೨೦೧ ನಾಗರಿಕರು ಸಾವನ್ನಪ್ಪಿದ್ದಾರೆ ಮತ್ತು ೭೪೭ ಜನರು ಗಾಯಗೊಂಡಿದ್ದಾರೆಂದು, (IRNA) ಇರಾನಿನ ರೆಡ್ ಕ್ರೆಸೆಂಟ್ ವರದಿ ನೀಡಿದೆ. ಈ ರೀತಿಯ ಕಾರ್ಯಚರಣೆಯ ಕುರಿತು ಅಮೆರಿಕ ಆಪರೇಷನ್ ಎಪಿಕ್ ಪ್ಯೂರಿ ಎಂದು ಕರೆದರೆ ಇಸ್ರೇಲ್ ಇದನ್ನು ಆಪರೇಷನ್ ರೋರಿಂಗ್ ಲಯನ್ ಎಂದು ಕರೆಯಲಾಗಿದೆ ಆದರೆ ಈ ದಾಳಿಯು ಅಂತರಾಷ್ಟ್ರೀಯ ಯುದ್ದದ ನಿಯಮಗಳನ್ನು ಅನುಸರಿಸಿವೆಯೇ ಎಂಬುವುದು ದೊಡ್ಡ ಚರ್ಚೆಗೆ ಗ್ರಾಸವಾಗಿದೆ. ಅಷ್ಟೇ ಅಲ್ಲ ಅಂತರಾಷ್ಟ್ರೀಯ ಕಾನೂನು ಮತ್ತು ರಾಜತಾಂತ್ರಿಕ ನಿಯಮಗಳನ್ನು ಮೀರಿವೆ. ಒಟ್ಟಾರೆ ನಡೆಯುತ್ತಿರುವ ಯುದ್ದವು ನಾಗರೀಕರನ್ನು ರಕ್ಷಿಸುವ ತತ್ವಕ್ಕೆ ವಿರುದ್ದವಾಗಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಯುದ್ದವನ್ನು ಮಾಡುವ ಕುರಿತು ಮಾತುಕತೆ ನಡೆಸದೆ ಒಮ್ಮಿಂದೊಮ್ಮಲೇ ದಾಳಿ ಮಾಡಿರುವುದರಿಂದ ಅಲ್ಲಿಯ ನಾಗರಿಕರು ಸಾವು ನೋವುಗಳು ಚಿಂತಾ ಜನಕವಾಗಿದೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಮತ್ತು ಆರ್ಥಿಕತೆಯನ್ನು ರಕ್ಷಿಸಿಕೊಳ್ಳಲು ಭಾರತ ಆರ್ಥಿಕವು ಕೈಗೊಳ್ಳಬಹುದಾದ ಹಾರ್ಮುಜ್ ಜಲಸಂಧಿಯ ತೈಲ ಹಡಗುಗಳ ಸುಗಮ ಸಂಚಾರಕ್ಕಾಗಿ ಇರಾನ್ ಮತ್ತು ಅಮೆರಿಕದೊಂದಿಗೆ ರಾಜತಾಂತ್ರಿಕ ಮಾತುಕತೆ ನಡೆಸಿ, ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆಗೆ ತಡೆ ಉಂಟಾಗದಂತೆ ನೋಡಿಕೊಳ್ಳುವುದು. ಹಾರ್ಮುಜ್ ಜಲಸಂಧಿಯಲ್ಲಿ ಭಾರತದ ವ್ಯಾಪಾರಿ ಹಡಗುಗಳಿಗೆ ಕಾವಲು ಒದಗಿಸಲು ನೌಕಾಪಡೆಯನ್ನು ನಿಯೋಜಿಸುವುದು. ಭಾರತವು ೨೦೨೬ರ ಈ ಬಿಕ್ಕಟ್ಟನ್ನು ನಿಭಾಯಿಸಲು ತನ್ನ ಬಲವಾದ ಮ್ಯಾಕ್ರೋ- ಆರ್ಥಿಕ ತಳಹದಿ (ಸ್ಥಿರ ಬೆಳವಣಿಗೆ, ನಿಯಂತ್ರಿತ

ಹಣದುಬ್ಬರ) ಮತ್ತು ರಾಜತಾಂತ್ರಿಕ ಚತುರತೆಯನ್ನು ಬಳಸಿಕೊಳ್ಳುತ್ತಿದೆ. ತೈಲ ಬೆಲೆ ಏರಿಕೆಯ ಹೊಡೆತವನ್ನು ತಗ್ಗಿಸಲು ಇಂಧನ ಮೂಲಗಳ ವೈವಿಧ್ಯೀಕರಣವೇ ಪ್ರಮುಖ ಪರಿಹಾರವಾಗಿದೆ.

ಅಮೆರಿಕ- ಇಸ್ರೇಲ್ ಮತ್ತು ಇರಾನ್ ನಡುವಿನ ಸಂರ್ಘ ತೀವ್ರಗೊಳ್ಳುತ್ತಿದ್ದು, ಜಾಗತಿಕ ಆರ್ಥಿಕ ಮೇಲೆ ಇದರ ಪರಿಣಾಮ ಬೀರುತ್ತಿದೆ. ಇದು ಹೀಗೆಯೇ ಮುಂದುವರಿದರೆ ಭಾರತದ (India) ಮೇಲೂ ಪರಿಣಾಮ ಬೀರುವುದು ಕಟು ಸತ್ಯವಾಗಿದೆ. ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಜಾಲಗಳ ಮೇಲಿನ ಅವಲಂಬನೆಯಿಂದಾಗಿ ಅಂತಹ ಸಂಘರ್ಷಗಳಿಗೆ ಗುರಿಯಾಗುತ್ತದೆ. ಮಧ್ಯಪ್ರಾಚ್ಯದಲ್ಲಿ (Middle East) ಉಂಟಾಗಿರುವ ಹೊಸ ಉದ್ವಿಗ್ನತೆಯಿಂದ ಕಚ್ಚಾ ತೈಲ (crude oil) ಬೆಲೆಗಳು ಮತ್ತು ಸರಕು ಸಾಗಣೆಯ ಮೇಲೆ ನೀತಿ ನಿರೂಪಕರು ಹೆಚ್ಚಿನ ಗಮನ ಹರಿಸಿದ್ದಾರೆ. ಭಾರತವು ಆಮದು ಮಾಡಿಕೊಂಡ ತೈಲ ಮತ್ತು ಅನಿಲದ ಮೇಲೆ ಹೆಚ್ಚಿನ ಅವಲಂಬನೆಯನ್ನು ನೀಡಿದರೆ, ಕಚ್ಚಾ ತೈಲ ಬೆಲೆಗಳಲ್ಲಿ ಯಾವುದೇ ನಿರಂತರ ಹೆಚ್ಚಳವು ಗ್ರಾಹಕರು ಮತ್ತು ವ್ಯವಹಾರಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಯುದ್ದದ ಕರಿನೆರಳು ಮಾರುಕಟ್ಟೆಯ ಮೇಲೆಯೂ ಹೆಚ್ಚು ಪೆಟ್ಟು ಬಿದ್ದಿದೆ. ಜಾಗತಿಕ ಶಕ್ತಿ ಚಲನಶೀಲತೆ ಮತ್ತು ಕಾರ್ಯತಂತ್ರದ ಸ್ವಾಯತ್ತತೆಯ ಸಂದರ್ಭದಲ್ಲಿ ಭಾರತದ ನೀತಿ ಪ್ರತಿಕ್ರಿಯೆಗಳನ್ನು ಅಧ್ಯಯನವು ಮತ್ತಷ್ಟು ವಿಶ್ಲೇಷಿಸುತ್ತದೆ. ಭೌಗೋಳಿಕ ರಾಜಕೀಯ ಸಂಘರ್ಷಗಳು ಗಣನೀಯ ಆರ್ಥಿಕ ಅಪಾಯಗಳನ್ನು ಸೃಷ್ಟಿಸಿದರೆ, ಭಾರತದ ಹೊಂದಾಣಿಕೆಯ ತಂತ್ರಗಳು ಮತ್ತು ನೀತಿ ಮಧ್ಯಸ್ಥಿಕೆಗಳು ಸ್ಥಿತಿಸ್ಥಾಪಕತ್ವ ಮತ್ತು ದೀರ್ಘಕಾಲೀನ ಆರ್ಥಿಕ ಸುಸ್ಥಿರತೆಗೆ ಕೊಡುಗೆ ನೀಡುತ್ತವೆ ಎಂದು ಅದು ವಾದಿಸುತ್ತದೆ. ಭಾರತೀಯ ರಾಜಕೀಯ ಆರ್ಥಿಕತೆ, ಇಂಧನ ಭದ್ರತೆ, ಹಣದುಬ್ಬರ, ವ್ಯಾಪಾರ ಅಡಚಣೆಗಳು, ಕಾರ್ಯತಂತ್ರದ ಸ್ವಾಯತ್ತತೆ ಮತ್ತು ಆರ್ಥಿಕ ಸ್ಥಿತಿ ಕುಸಿತದ ಭೀತಿ ಭಾರತದ ಆರ್ಥಿಕತೆಗೆ ಅತಿದೊಡ್ಡ ಸವಾಲುಗಳಾಗಿವೆ. ಭಾರತವು ಮೂರನೇ ಅತಿದೊಡ್ಡ ತೈಲ ಗ್ರಾಹಕ ಮತ್ತು ಆಮದುದಾರ ರಾಷ್ಟ್ರವಾಗಿದ್ದು, ಈ ಬೆಲೆ ಆಘಾತಗಳಿಂದ ಅಸಮಾನ ಆರ್ಥಿಕ ಹೊರೆಯನ್ನು  ಹೊಂದಿದೆ ಏರುತ್ತಿರುವ ತೈಲ ಬೆಲೆಗಳು ಸಾರಿಗೆ, ಉತ್ಪಾದನೆ ಮತ್ತು ಇಂಧನ ಉತ್ಪಾದನೆಯ ವೆಚ್ಚಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ, ಇದು ಹೆಚ್ಚಿನ ಹಣದುಬ್ಬರ ದರಗಳಿಗೆ ಕಾರಣವಾಗುತ್ತದೆ. ಉದಾಹರಣೆಗೆ, ೧೯೯೦-೯೧ ರ ಕೊಲ್ಲಿ ಯುದ್ದದ ಸಮಯದಲ್ಲಿ, ತೈಲ ಬೆಲೆಗಳು ದ್ವಿಗುಣಗೊಂಡವು ಭಾರತದಲ್ಲಿ ಹಣದುಬ್ಬರ ತೀವ್ರವಾಗಿ ಏರಲು ಮತ್ತು ಹಣಕಾಸಿನ ಕೊರತೆಯನ್ನು ಉಲ್ಬಣಗೊಳಿಸಲು ಕಾರಣವಾಯಿತು ಇತ್ತೀಚೆಗೆ, ಇಸ್ರೇಲ್ ಮತ್ತು ಇರಾನ್ ಒಳಗೊಂಡ ಉದ್ವಿಗ್ನತೆಗಳು ಕಚ್ಚಾ ತೈಲ ಬೆಲೆಗಳನ್ನು ಹೆಚ್ಚಿಸಿವೆ, ಜಾಗತಿಕ ಇಂಧನ ಭದ್ರತೆ ಮತ್ತು ಬೆಲೆ ಏರಿಳಿತದ ಬಗ್ಗೆ ಕಳವಳಗಳನ್ನು ಪುನರುಜ್ಜೀವನಗೊಳಿಸಿವೆ ಪ್ರಸ್ತುತ ಸಂರ್ಘಗಳ ಸಂದರ್ಭದಲ್ಲಿ, ಬ್ರೆಂಟ್ ಕಚ್ಚಾ ತೈಲದ ಬೆಲೆಗಳು ಬ್ಯಾರೆಲ್‌ಗೆ ೯೦ ಕ್ಕಿಂತ ಹೆಚ್ಚಿನ ಬೆಲೆ ಏರಿಕೆಗೆ ಕಾರಣವಾಗಬಹುದು. ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಸೈದ್ಧಾಂತಿಕ ಈ ಸಂಶೋಧನಾ ಕಿರು ಲೇಖನವು

ರಾಜಕೀಯ ಆರ್ಥಿಕ ಚೌಕಟ್ಟಿನ ಮೂಲಕ ಭಾರತೀಯ ಆರ್ಥಿಕತೆಯ ಮೇಲೆ ಭೌಗೋಳಿಕ ರಾಜಕೀಯ ಸಂಘರ್ಷಗಳ ಕುರಿತು ಪರಿಶೀಲನೆ ಮಾಡುವ ಒಂದು ಸಣ್ಣ ಪ್ರಯತ್ನ ಇದಾಗಿದೆ. ರಾಜಕೀಯ ಆರ್ಥಿಕತೆಯು ಆರ್ಥಿಕ ವ್ಯವಸ್ಥೆಗಳು ರಾಜಕೀಯ ರಚನೆಗಳಲ್ಲಿ ಆಳವಾಗಿ ಹುದುಗಿದೆ ಎಂದು ಒತ್ತಿಹೇಳುತ್ತದೆ, ಅಲ್ಲಿ ರಾಜ್ಯ ನೀತಿಗಳು, ಅಧಿಕಾರ ಸಂಬಂಧಗಳು ಮತ್ತು ಜಾಗತಿಕ ಸಂಸ್ಥೆಗಳು ಆರ್ಥಿಕ ಕಾರ್ಯಕ್ಷಮತೆಯನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಸಮಕಾಲೀನ ಜಾಗತಿಕ ರಾಜಕೀಯದಲ್ಲಿ, ಆರ್ಥಿಕ ಸಾಧನಗಳನ್ನು ಜಾಗತಿಕ ವ್ಯಾಪಾರ ಮಾದರಿಗಳು ಮತ್ತು ಹಣಕಾಸು ವ್ಯವಸ್ಥೆಗಳ ಮೇಲೆ ಪ್ರಭಾವ ಬೀರುವ ಕಾರ್ಯತಂತ್ರದ ಆಯುಧಗಳಾಗಿ ಹೆಚ್ಚಾಗಿ ಬಳಸಲಾಗುತ್ತದೆ.

ಭಾರತವು ತನ್ನ ಅಗತ್ಯದ ಬಹುಪಾಲು ಕಚ್ಚಾ ತೈಲ ಮತ್ತು ಅನಿಲವನ್ನು ಮಧ್ಯಪ್ರಾಚ್ಯದ ದೇಶಗಳಿಂದಲೇ ಆಮದು ಮಾಡಿಕೊಳ್ಳುತ್ತದೆ. ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವ ತೈಲ ಪೂರೈಕೆಗೆ ಅಡ್ಡಿಯಾದರೆ, ಕಚ್ಚಾ ತೈಲದ ಬೆಲೆ ಏರಿಕೆಯಾಗುವುದು ಖಚಿತ. ಈಗಾಗಲೇ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಶೇ ೧೦ ರಷ್ಟು ಏರಿಕೆಯಾಗಿದೆ. ಇದು ಮುಂದುವರೆದರೆ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಅನಿಲ ಬೆಲೆ ಏರಿಕೆಯಾಗಬಹುದು. ಆದರೆ ಸರ್ಕಾರವು ತೆರಿಗೆ ಕಡಿತ ಅಥವಾ ತೈಲ ಕಂಪನಿಗಳ ಕಡಿಮೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ಹೊರೆ ಬೀಳದಂತೆ ನೋಡಿಕೊಳ್ಳುವ ಸಾಧ್ಯತೆಯಿದೆ. ಸದ್ಯದ ಮಟ್ಟಿಗೆ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಬ್ಯಾರಲ್ ತೈಲ ಬೆಲೆ ೭೩ ಡಾಲರ್ ಇದೆ. ಸಂಘರ್ಷ ಮುಂದುವರಿದರೆ ೧೦೦ ಡಾಲರ್ ತಲುಪಿದರೂ ಅಚ್ಚರಿ ಇಲ್ಲ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಇಸ್ರೇಲ್-ಇರಾನ್ ಸಂಘರ್ಷದ ಬಿಸಿ ಕತಾರ್, ಯುಇಎ, ಬಹರೇನ್, ಸೌದಿ ಅರೇಬಿಯಾ, ಕುವೈತ್ ಸೇರಿ ಕೊಲ್ಲಿರಾಷ್ಟ್ರಗಳಿಗೂ ತಟ್ಟಿದ್ದು, ತೈಲ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಸರಬರಾಜಿನಲ್ಲಿ ಏರಿಳಿತವಾಗಿದೆ. ಜನಸಾಮಾನ್ಯರ ದೈನಂದಿನ ಬದುಕಿನ ಮೇಲೂ ಗಂಭೀರ ಪರಿಣಾಮ ಬೀರುವ ಸಾಧ್ಯತೆ ದಟ್ಟವಾಗಿದೆ. ಭಾರತವು ಇರಾನ್ನಿಂದ ತೈಲ ರಫ್ತು ಮಾಡಿಕೊಳ್ಳುವುದನ್ನು ೨೦೧೯ರಲ್ಲೇ ಬಹುತೇಕ ನಿಲ್ಲಿಸಿದೆ. ಆದರೆ, ದೇಶಕ್ಕೆ ಆಮದಾಗುವ ಶೇ ೪೦ರಷ್ಟು ಕಚ್ಚಾ ತೈಲ, ಶೇ ೮೦ರಷ್ಟು ದ್ರವೀಕೃತ ನೈಸರ್ಗಿಕ ಅನಿಲ (ಎಲ್ಪಿಜಿ) ಮತ್ತು ಶೇ ೯೦ ರಷ್ಟು ಅಡುಗೆ ಅನಿಲ (ಎಲ್ಪಿಜಿ) ಸಾಗಣೆಯಾಗುವುದು ಇರಾನ್ ಮತ್ತು ಒಮಾನ್ ನಡುವಿನ ಹಾರ್ಮುಜ್ ಜಲಸಂಧಿ ಮೂಲಕ. ದೇಶದ ಇಂಧನ ಮತ್ತು ಎಲ್ಪಿಜಿ ಅಗತ್ಯಗಳಿಗಾಗಿ ಹೆಚ್ಚಿನ ಪಾಲು ಆಮದನ್ನೇ ಅವಲಂಬಿಸಿರುವ ಭಾರತದಲ್ಲಿ ಇರಾನ್ ಯುದ್ಧವು ಹಲವು ರೀತಿಯ ಬಿಕ್ಕಟ್ಟುಗಳನ್ನು ಸೃಷ್ಟಿಸಿದೆ. ಯುದ್ಧ ಆರಂಭವಾದ ನಂತರ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ದರ ಶೇ ೭೫ರಷ್ಟು ಹೆಚ್ಚಳವಾಗಿದೆ. ಜಗತ್ತಿನ ಹಲವು ದೇಶಗಳಲ್ಲಿ ಇಂಧನ ಮತ್ತು ಎಲ್ಪಿಜಿ ದರ ಹೆಚ್ಚಿಸಲಾಗಿದೆ.

## ೭. ಸಮಾರೋಪ

ಅಮೆರಿಕ ಇಸ್ರೇಲ್ ಮತ್ತು ಇರಾನ್ ಈ ಮೂರು ದೇಶಗಳ ಕದನದಿಂದಾಗಿ ಜಾಗತಿಕ ಆರ್ಥಿಕತೆಯ ಮೇಲೆ ಕರಾಳ ಸ್ಥಿತಿಯು ನಿರ್ಮಾಣವಾಗಿದೆ. ಈ ಮೂರು ದೇಶಗಳ ಕದನದ ಪರಿಣಾಮದಿಂದಾಗಿ ಭಾರತಕ್ಕೆ ಬಹುದೊಡ್ಡ ಆರ್ಥಿಕ ವಿಘಂಟು ಜಟಿಲವಾದ ಸಮಸ್ಯೆ ಎದುರಿಸುತ್ತಿದೆ. ಭಾರತವು ಭೌಗೋಳಿಕ ರಾಜಕೀಯ ಸಂಘರ್ಷಗಳ ನಡುವೆ ಆರ್ಥಿಕ ಸ್ಥಿರತೆ ಮತ್ತು ಬೆಳವಣಿಗೆಯ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಲು ಹೂಡಿಕೆ ಮೂಲಕ ಅಭಿವೃದ್ಧಿಗೆ ಆದ್ಯತೆಯು ಅನಿವಾರ್ಯಗಿದೆ. ಇತರ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಒಗ್ಗಟ್ಟನ್ನು ವ್ಯಕ್ತಪಡಿಸಲು ಭಾವನಾತ್ಮಕ ಮತ್ತು ಸೈದ್ಧಾಂತಿಕ ಅಂಶವು ಭಾರತವು ಅಭಿವೃದ್ಧಿ ನೆರವಿನಲ್ಲಿ ತೊಡಗಿಸಿಕೊಳ್ಳಲು ಪ್ರಮುಖ ಪ್ರೇರಕ ಅಂಶವಾಗಿದೆ. ಭಾರತೀಯ ಉತ್ಪನ್ನಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳ ಮಾರುಕಟ್ಟೆಗೆ ಪ್ರವೇಶದ ಆರ್ಥಿಕ ಅಂಶವು ಹೆಚ್ಚುವರಿ ಪ್ರೇರಣೆಯಾಯಿತು. ಮಧ್ಯಪ್ರಾಚ್ಯದಲ್ಲಿ (Middle East) ಉಂಟಾಗಿರುವ ಹೊಸ ಉದ್ವಿಗ್ನತೆಯಿಂದ ಕಚ್ಚಾ ತೈಲ (crude oil) ಬೆಲೆಗಳು ಮತ್ತು ಸರಕು ಸಾಗಣೆಯ ಮೇಲೆ ನೀತಿ ನಿರೂಪಕರು ಹೆಚ್ಚಿನ ಗಮನ ಹರಿಸಿದ್ದಾರೆ. ಭಾರತವು ಆಮದು ಮಾಡಿಕೊಂಡ ತೈಲ ಮತ್ತು ಅನಿಲದ ಮೇಲೆ ಹೆಚ್ಚಿನ ಅವಲಂಬನೆಯನ್ನು ನೀಡಿದರೆ, ಕಚ್ಚಾ ತೈಲ ಬೆಲೆಗಳಲ್ಲಿ ಯಾವುದೇ ನಿರಂತರ ಹೆಚ್ಚಳವು ಗ್ರಾಹಕರು ಮತ್ತು ವ್ಯವಹಾರಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಅದೇ ರೀತಿಯಾಗಿ ಕಳೆದ ಕೆಲವು ಸಂಘರ್ಷಗಳಿಂದ ಕರೋನ ಸಂದರ್ಭದಲ್ಲಿ ಸಾಂಕ್ರಾಮಿಕ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾರತ ಆರ್ಥಿಕ ಕೈಗೊಂಡಿರುವ ಕ್ರಮಗಳ ಕುರಿತು ಆರ್ಥಿಕತೆಯನ್ನು ಗಮನಾರ್ಯವಾಗಿ ಸ್ಥಿತಿಸ್ಥಾಪಕತ್ವವನ್ನು ಹೊಂದಿ ಅಭೂತ ಪರ್ವವಾಗಿ ಎದುರಿಸಿರುವುದು ಒಂದು ದೊಡ್ಡ ಸವಾಲುಗಳನ್ನು ಎದುರಿಸಿರುವುದೆಂದು ಸಾಬೀತಾಗಿದೆ. ವಿಶ್ವದ ಆರ್ಥಿಕತೆಯ ಚಲನಶೀಲತೆಯಲ್ಲಿನ ಬದಲಾವಣೆಗಳನ್ನು ಒಳಗೊಂಡಂತೆ ಹಲವು ಏರಿಳಿತಗಳ ಪರಿಣಾಮಗನ್ನು ಕಂಡಿದೆ. ಹಾಗಾಗಿ ಭಾರತಕ್ಕೆ ಆಗಾಗ ಪ್ರಕೃತಿಕ ವಿಕೋಪದಿಂದಾಗಿ ವಿಶ್ವದ ಕೆಲವು ರಾಷ್ಟ್ರಗಳ ಕದನಗಳಿಂದಾಗಿ ಆರ್ಥಿಕವಾಗಿ ರಾಜಕೀಯವಾಗಿ ಸಾಮಾಜಿಕವಾಗಿ ಎದುರಿಸುತ್ತಿರುವುದು ಅನಿವಾರ್ಯವಾಗಿದೆ. ಎಂದು ಹೇಳಬಹುದಾಗಿದೆ

## ಗ್ರಂಥಋಣ


೧. ಪ್ರೊ. ಎನ್.ವಿ. ಪಾಟೀಲ ಮತ್ತು: ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು

೨. ಪ್ರೊ. ಜಿ. ಬಿ. ಶೀಲವಂತರ ಪ್ರೊ :

೩. ಮಾಲಿ ಮದ್ದಣ್ಣ : ಅಂತಾರಾಷ್ಟ್ರೀಯ ಸಂಬಂಧಗಳು

೪. ಪ್ರೊ. ಎನ್. ಆರ್. ಅಪರಂಜಿ : ಅಂತಾರಾಷ್ಟ್ರೀಯ ಸಂಬಂಧಗಳು

**ಮಾಸಿಕಗಳು, ದ್ವೈಮಾಸಿಕಗಳು, ದೈನಿಕಗಳು**

೫. ದಿಕ್ಸೂಚಿ ಮಾಸಿಕ, ೬. The New Indian Express, ೭. ಸಂಯುಕ್ತ ಕರ್ನಾಟಕ, ೮. ವಿಜಯ ಕರ್ನಾಟಕ

೯. ಪ್ರಜಾವಾಣಿ, ೧೦. ದೈನಿಕಗಳು, ೧೧. ಕನ್ನಡಪ್ರಭ